# ಗೀತೆಯಲ್ಲಿ ಭಕ್ತಿ ಹಾಗೂ ಭಕ್ತ

**ಡಾ. ವಿ. ಶ್ರೀಮತಿ**

ಶ್ರೀಮದ್ಭಗವದ್ಗೀತೆಯ ಆದಿಯಿಂದ ಅಂತ್ಯದವರೆಗೂ ಹಾಸುಹೊಕ್ಕಾಗಿ ವ್ಯಾಪಿಸಿಕೊಂಡಿರುವ ಭಾವವೇ ಭಕ್ತಿ. ತತ್ತ್ವವಿಚಾರದೊಂದಿಗೆ ಭಕ್ತಿ-ಭಾವಗಳನ್ನು ಇಷ್ಟೊಂದು ಪರಿಪಕ್ವವಾಗಿ ಸಮನ್ವಯಗೊಳಿಸಿದ ಶಾಸ್ತ್ರಗ್ರಂಥ ಬೇರೊಂದಿಲ್ಲ ಎನ್ನಬಹುದು. ಈ ಕುರಿತು ವಿವರಿಸಿರುವ ಲೇಖಕಿ, ಮೈಸೂರಿನಲ್ಲಿ ಸಂಸ್ಕೃತ ಉಪನ್ಯಾಸಕಿಯಾಗಿದ್ದಾರೆ. ಸಂಗೀತ, ಕಲೆ, ಶಾಸ್ತ್ರ, ಅಧ್ಯಾತ್ಮ ಹೀಗೆ ಹಲವು ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ಅವರು ಅನೇಕ ಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ.




**ಮಾ**ನವ ಭೌತಿಕ ಕ್ಷೇತ್ರದಲ್ಲಿ ಹಲವಾರು ಸಾಧನೆಗಳನ್ನು ಮಾಡಿರುವನು. ಆ ಸಾಧನೆಯಿಂದ ಅಂತಸ್ತು, ಅಧಿಕಾರ, ಹಿರಿಮೆ, ಗರಿಮೆಗಳನ್ನು ಪಡೆದಿರುವನು. ತನ್ನ ಆ ಸಾಧನೆಗಾಗಿ ಬೇರೆಯವರಿಂದ ಪ್ರಶಂಸೆಯನ್ನು ಪಡೆದು ತಾನೂ ಹಿಗ್ಗಿರಬಹುದು. ಆದರೆ ಇವು ಯಾವುವೂ ಶಾಶ್ವತವಲ್ಲ. ನಮ್ಮ ಶ್ರೇಯಸ್ಸಿಗೆ ಕಾರಣವಾಗುವುದಿಲ್ಲ. ಹಾಗಾದರೆ ಶಾಶ್ವತವಾದದ್ದು ಯಾವುದು? ನಮ್ಮ ಶ್ರೇಯಸ್ಸು ಯಾವುದರಿಂದ ಉಂಟಾಗುತ್ತದೆ? ಎಂದು ಆಲೋಚಿಸಿದರೆ ನಮ್ಮ ಕರ್ಮಫಲಗಳೇ ನಮಗೆ ಶಾಶ್ವತ. ಭಗವದನುಗ್ರಹದಿಂದ ಮಾತ್ರ ನಮ್ಮ ಶ್ರೇಯಸ್ಸು ಎಂಬುದು ಅರಿವಾಗುತ್ತದೆ. ಹಾಗಾದರೆ ಭಗವಂತನ ಅನುಗ್ರಹವನ್ನು ನಾವು ಪಡೆಯುವುದು ಹೇಗೆ? ಅದಕ್ಕಾಗಿ ನಾವೇನು ಮಾಡಬೇಕು? ಇತ್ಯಾದಿ ಸಂಶಯಗಳು ಕಾಡತೊಡಗುತ್ತವೆ.

ಭಗವಂತನ ಅನುಗ್ರಹವನ್ನು ಪಡೆಯಲು ವಿಶೇಷವಾಗಿ ಏನೂ ಕಷ್ಟಪಡಬೇಕಾಗಿಲ್ಲ. ಆತನಲ್ಲಿ ದೃಢ ಭಕ್ತಿಯೊಂದಿದ್ದರೆ ಸಾಕು. ನಮ್ಮನ್ನು ಆತನೇ ರಕ್ಷಿಸುತ್ತಾನೆ. ''ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ'' ಎಂದು ದಾಸವಾಣಿ ತಿಳಿಸುವಂತೆ ಭಕ್ತರ ಭಕ್ತಿಗೆ ಒಲಿದು ಅನುಗ್ರಹಿಸುವನು ಆ ಕೃಪಾಳು ಪರಮಾತ್ಮ.

ಆದರೆ ಭಗವಂತನ ಕೃಪೆಗೆ ಪಾತ್ರರಾಗಬೇಕಾದರೆ ನಾವು ಅದಕ್ಕೆ ಬೇಕಾದ ಅರ್ಹತೆಯನ್ನು ಗಳಿಸಿರಬೇಕು. ಪರಿಶುದ್ಧ ಮನಸ್ಸನ್ನು ಹೊಂದಿ, ನಿಷ್ಕಾಮ ಭಾವದಿಂದ ಭಗವಂತನನ್ನು ಆರಾಧಿಸಬೇಕು. ದೃಢವಾದ ಹಾಗೂ ಅಚಲವಾದ ಭಕ್ತಿಯನ್ನು ಹೊಂದಿರಬೇಕು. ಶಾಸ್ತ್ರಾದಿ ವಚನಗಳಲ್ಲಿ ಶ್ರದ್ಧೆಯಿರಬೇಕು. ಧರ್ಮಮಾರ್ಗವನ್ನವಲಂಬಿಸಿರಬೇಕು. ಸುಜ್ಞಾನವನ್ನು ಪಡೆದಿರಬೇಕು. ನಮ್ಮ ಕರ್ತವ್ಯಗಳನ್ನು ಎಂದೂ ಕಡೆಗಣಿಸಿರಬಾರದು. ನಡೆ-ನುಡಿ ಒಂದೇ ಆಗಿರಬೇಕು. ಸುಖ-ದುಃಖಗಳನ್ನು ಸಮಾನವಾಗಿ ಭಾವಿಸಬೇಕು.

ಇಷ್ಟೆಲ್ಲ ಯೋಗ್ಯತೆಯನ್ನು ಪಡೆಯುವುದಾದರೂ ಹೇಗೆ? ಅದೂ ಯಾರಿಂದ? ಅಥವಾ ಯಾವುದರಿಂದ? ನನ್ನ ಅಲ್ಪ ಬುದ್ಧಿಗೆ ಇವೆಲ್ಲ ನಿಲುಕುವುದೆ? ಹೀಗೆ ನಾನಾ ಸಂದೇಹಗಳು ಮನಸ್ಸಿನಲ್ಲಿ ಮೂಡಬಹುದು. ಇವೆಲ್ಲಕ್ಕೂ ಇರುವ ಒಂದೇ ಒಂದು ಸರಳ ಉಪಾಯವೆಂದರೆ ಶ್ರೀಮದ್ಭಗವದ್ಗೀತೆ. ಗೀತೆಗೆ ನಾವು ಶರಣಾದರೆ ಸಾಕು, ನಮ್ಮನ್ನು ಶ್ರೇಯಸ್ಸಿನೆಡೆಗೆ ಅದು ಕರೆದೊಯ್ಯುತ್ತದೆ. ಹೆಸರೇ ತಿಳಿಸುವಂತೆ ಭಗವಂತನೇ ಹೇಳಿದ ಮಾತುಗಳು. ಆತನೇ ನೀಡಿರುವ ಆಶ್ವಾಸನೆ ಭಗವದ್ಗೀತೆ. ಅಂದ ಮೇಲೆ ಭಕ್ತಿಯಿಂದ ನಮ್ಮನ್ನು ಗೀತೆಗೆ ಸಮರ್ಪಿಸಿಕೊಳ್ಳುವುದಷ್ಟೇ ನಮ್ಮ ಕರ್ತವ್ಯ.

ಪ್ರಸ್ಥಾನತ್ರಯಗಳಲ್ಲಿ ಒಂದಾಗಿರುವ ಶ್ರೀಮದ್ಭಗವದ್ಗೀತೆಯನ್ನು ಪ್ರಾಚೀನರು ಮೋಕ್ಷಶಾಸ್ತ್ರವೆಂದು ಕರೆದರು. ಏಕೆಂದರೆ ಅವರ ಜೀವನದ ಗುರಿ ಮುಕ್ತಿಯೇ ಆಗಿತ್ತು. ಗೀತೆಯು ಅದಕ್ಕೆ

ಬೇಕಾದ ಮಾರ್ಗದರ್ಶನವನ್ನು ನೀಡುತ್ತದೆ ಎಂಬುದನ್ನು ಅವರು ಕಂಡುಕೊಂಡಿದ್ದರು. ಆದರೆ ಈಗ ಇಹಜೀವನದ ಮೋಹ ನಮ್ಮನ್ನು ಆವರಿಸಿದೆ. ಚಿಂತೆಗಳ ಸರಮಾಲೆಯೇ ನಮ್ಮನ್ನು ಸುತ್ತಿರುವಾಗ ಮೋಕ್ಷವನ್ನು ಕುರಿತಾದ ಚಿಂತನೆಗೆ ಅವಕಾಶವೇ ಇಲ್ಲದಂತಾಗಿದೆ. ಈಗ ನಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಬೇಕಾಗಿದೆ. ಇದನ್ನೂ ನೀಡಬಲ್ಲದು ಗೀತೆ. ಮೋಕ್ಷ ಶಾಸ್ತ್ರವೆನಿಸಿದ ಗೀತೆ ಈ ಆಧುನಿಕ ಯುಗದ ಲೌಕಿಕ ಸಮಸ್ಯೆಗಳಿಗೂ ಪರಿಹಾರ ನೀಡಬಲ್ಲದು. ಚಂಚಲವಾದ ಮನಸ್ಸನ್ನು ಸ್ತಿಮಿತದಲ್ಲಿಟ್ಟುಕೊಂಡು ಪರಿಸ್ಥಿತಿಯನ್ನು ಎದುರಿಸಲು, ಸೂಕ್ತ ನಿರ್ಧಾರವನ್ನು ಕೈಗೊಳ್ಳಲು ಬೇಕಾದ ಮಾನಸಿಕ ಸಿದ್ಧತೆಯನ್ನು ಗೀತೆಯು ಒದಗಿಸುತ್ತದೆ. ನಮ್ಮ ವಿಹಿತ ಕರ್ತವ್ಯಗಳನ್ನು ಯಥಾ ರೀತಿಯಲ್ಲಿ ನಿರ್ವಹಿಸಲು ಬೇಕಾದ ಮಾರ್ಗದರ್ಶನವನ್ನು ಗೀತೆಯು ನೀಡುತ್ತದೆ. ಅವರವರ ಮನೋಭಾವಕ್ಕೆ ನಿಲುಕುವಂತೆ, ಆಯಾಯಾ ಸ್ತರಕ್ಕೆ ಇಳಿದು ಅವರಿಗೆ ಅಗತ್ಯವಾದ ಸಮಾಧಾನವನ್ನು ನೀಡುವುದು ಗೀತೆಯ ವೈಶಿಷ್ಟ್ಯ. ಸಾಮಾನ್ಯ ಜನರಿಗೆ ಸಹಜವಾಗಿ ಮೂಡುವ ಭಕ್ತಿಯಿಂದ ಹಿಡಿದು ಮುಮುಕ್ಷುಗಳಿಗೆ ಅಗತ್ಯವಾದ ತತ್ತ್ವಬೋಧನೆಯವರೆಗೂ ಶ್ರೀಕೃಷ್ಣನ ಮಾರ್ಗದರ್ಶನ ಲಭ್ಯವಾಗುತ್ತದೆ.

ಗೀತಾಪಾರಾಯಣ ಎಂಬುದು ಎಲ್ಲರೂ ತಿಳಿದಿರುವ ವಿಷಯ. ಯಾವುದೇ ಗ್ರಂಥವನ್ನು ಪಾರಾಯಣ ಮಾಡಬೇಕಾದರೆ ಅದರ ಬಗ್ಗೆ ಪೂಜ್ಯಭಾವನೆಯಿರಬೇಕು. ಅದು ತನ್ನನ್ನು ಉದ್ಧರಿಸುತ್ತದೆ ಎಂಬ ದೃಢ ನಂಬಿಕೆಯಿರಬೇಕು. ಆ ದೃಢನಂಬಿಕೆಯೇ ಭಕ್ತಿ. ಹಾಗಾಗಿ ಭಕ್ತಿಭಾವ ತುಂಬಿರುವ ಭಕ್ತ ಮಾತ್ರ ಗೀತೆಯ ಸಮೀಪ ಹೋಗಬಲ್ಲ. ಪಾರಾಯಣ ಮಾಡಿದ್ದನ್ನು ಮನನ ಮಾಡಿಕೊಂಡಾಗ ಗೀತೆಯ ಭಾವ ಹೃದ್ಗತವಾಗುತ್ತದೆ. ಭಕ್ತನಲ್ಲದವನಿಗೆ ಇದು ಎಟುಕಲಾರದ ದ್ರಾಕ್ಷಿಯಂತಾಗುತ್ತದೆ.

ಗೀತೆಯಲ್ಲಿ ಒಂದು ಅಧ್ಯಾಯ ಭಕ್ತಿಯ ಶ್ರೇಷ್ಠತ್ವವನ್ನೇ ತಿಳಿಸುವ ಧ್ಯೇಯದೊಂದಿಗೆ ಭಕ್ತಿಯೋಗ ಎಂಬ ಹೆಸರಿನಿಂದಲೇ ಕೂಡಿದೆ. ಆದರೆ ಉಳಿದ ಎಲ್ಲಾ ಅಧ್ಯಾಯಗಳೂ ಸಹ ಭಕ್ತಿ ಎಂಬ ಸೂತ್ರದಿಂದ ಕಟ್ಟಿರುವ ಪುಷ್ಪಮಾಲೆಯೇ ಆಗಿದೆ. ಭಕ್ತಿಯನ್ನು ಎಲ್ಲೂ ಮರೆಯಲಾಗುವುದಿಲ್ಲ. ಅರ್ಜುನನು ಶ್ರೀಕೃಷ್ಣನ ಪರಮ ಭಕ್ತನಾಗಿರುವನು. ಆದ್ದರಿಂದಲೇ ಆತನ ರಕ್ಷಣೆಯ ಹೊಣೆಯನ್ನು ಪರಮಾತ್ಮನು ಹೊತ್ತುಕೊಂಡಿರುವನು.

ಗೀತೆಯು ಪ್ರಾರಂಭವಾಗುವುದಕ್ಕೆ ಮೊದಲೇ ಅರ್ಜುನ ಶ್ರೀಕೃಷ್ಣನ ಭಗವತ್ ತತ್ತ್ವವನ್ನು ಅರಿತು ಶರಣಾಗಿದ್ದಾನೆ. ಆತನಲ್ಲಿ ಭಕ್ತಿಭಾವವನ್ನು ಹೊಂದಿದ್ದಾನೆ. ಸಂಪೂರ್ಣ ನಂಬಿಕೆಯನ್ನು ಇರಿಸಿದ್ದಾನೆ.

ಕುರುಕ್ಷೇತ್ರ ಯುದ್ಧ ಪ್ರಾರಂಭವಾಗುವ ಮೊದಲು ಅರ್ಜುನ ಹಾಗೂ ದುರ್ಯೋಧನರಿಬ್ಬರೂ ಶ್ರೀಕೃಷ್ಣನ ಬಳಿ ಸಹಾಯವನ್ನು ಯಾಚಿಸಲು ತೆರಳುತ್ತಾರೆ. ಆ ಸಮಯದಲ್ಲಿ ಶ್ರೀಕೃಷ್ಣನು ನಿದ್ರಿಸಿರುತ್ತಾನೆ. ದುರ್ಯೋಧನನು ಕೃಷ್ಣನ ತಲೆಯ ಬಳಿ ಹಾಗೂ ಅರ್ಜುನನು ಪಾದದ ಬಳಿ ಕುಳಿತು ನಿರೀಕ್ಷಿಸುತ್ತಿರುತ್ತಾರೆ. ಎಚ್ಚರಗೊಂಡ ಕೃಷ್ಣ ಮೊದಲು ಅರ್ಜುನನ ಅಪೇಕ್ಷೆಯನ್ನು ಕೇಳುತ್ತಾನೆ. ತಾನು ಯುದ್ಧ ಮಾಡುವುದಿಲ್ಲ. ತಾನು ಒಂದುಕಡೆ, ತನ್ನ ಸಮಸ್ತ ನಾರಾಯಣಿ ಸೈನ್ಯ ಮತ್ತೊಂದು ಕಡೆ. ಯಾವುದನ್ನು ಬೇಕಾದರೂ ಆಯ್ಕೆ ಮಾಡಬಹುದು ಎಂದಾಗ ಅರ್ಜುನ ಸಂಪೂರ್ಣ ಮನಸ್ಸಿನಿಂದ ಶ್ರೀಕೃಷ್ಣನನ್ನು ಬಯಸುತ್ತಾನೆ. ಅನಂತರ ಅದಕ್ಕೆ ಕಾರಣವನ್ನು ಆತ ಶ್ರೀಕೃಷ್ಣನಿಗೆ ತಿಳಿಸುತ್ತಾನೆ. ಸಮಸ್ತ ಸೈನ್ಯವನ್ನು ಹೊಡೆದೋಡಿಸುವ ಶಕ್ತಿ ನಿನ್ನೊಬ್ಬನಲ್ಲೇ ಇದೆ. ನಿನ್ನ ಕೃಪೆ ನನಗಿದ್ದರೆ ಸಾಕು ಎನ್ನುತ್ತಾನೆ. ನಂಬಿಕೆ ಎಂದರೆ ಇದು. ಇದು ಶ್ರೇಷ್ಠ ಭಕ್ತನ ಅಚಲ ನಂಬಿಕೆ. ಇಂತಹ ಭಕ್ತನನ್ನು ಪರಮಾತ್ಮ ಎಂದಾದರೂ ಕೈಬಿಡಲು ಸಾಧ್ಯವೆ ?

ಜೀವನದ ಧರ್ಮವನ್ನು ಬೋಧಿಸುವ ವಿಷಯದಲ್ಲಿ ಗೀತೆಗೆ ಸರಿಸಾಟಿಯಾಗಬಲ್ಲ ಯಾವುದೇ ಗ್ರಂಥವಿಲ್ಲ. ಶ್ರದ್ಧೆಯಿಂದ ಕೂಡಿ, ಸರ್ವಕರ್ಮಗಳನ್ನೂ ಭಗವಂತನಿಗೆ ಅರ್ಪಿಸಿ, ಅಸೂಯಾ ರಹಿತರಾಗಿ ಭಗವದ್ವಾಣಿಯನ್ನು ಪಾಲಿಸುವವರು ಕರ್ಮಬಂಧನದಿಂದ ಮುಕ್ತರಾಗುತ್ತಾರೆ.

ಗೀತೆಯಲ್ಲಿ ಜ್ಞಾನಯೋಗ, ಕರ್ಮಯೋಗ, ರಾಜಯೋಗ, ಭಕ್ತಿಯೋಗಗಳೆಂದು ನಾಲ್ಕು ಬಗೆಯ ಯೋಗಗಳನ್ನು ಕಾಣಬಹುದು. ಜ್ಞಾನಯೋಗಿಗೆ ಮನಸ್ಸಿನಲ್ಲಿ ವಿಚಾರಶಕ್ತಿಯಿರಬೇಕು. ಕರ್ಮಯೋಗಿಗೆ ಯೋಗ್ಯವಾದ ದೇಶ-ಕಾಲಗಳೂ, ಅನೇಕ ಉಪಕರಣ ಸಂಪತ್ತುಗಳೂ ಬೇಕಾಗುತ್ತವೆ. ರಾಜಯೋಗಿಗೆ ಯಮ-ನಿಯಮಾದಿ ಆಚರಣೆಗಳು ಅಗತ್ಯವಾಗುತ್ತವೆ. ಆದರೆ ಭಕ್ತಿಯೋಗಕ್ಕೆ ಈ ಯಾವುದೂ ಅಗತ್ಯವಿಲ್ಲ. ಎಂತಹ ಅವಿದ್ಯಾವಂತನೇ ಆಗಿರಲಿ, ಯಾವುದೇ ಸ್ಥಳದಲ್ಲಿರಲಿ, ಯಾವುದೇ ಕಾಲವಾಗಿರಲಿ, ಯಾವುದೇ ಸಾಧನಾ ಸಾಮಗ್ರಿಗಳು ಇಲ್ಲದಿದ್ದರೂ ಸುಲಭವಾಗಿ ಆಚರಿಸಬಹುದು. ಭಕ್ತಿ ಎಂಬುದು ಮಾನವನಿಗೆ ಅತ್ಯಂತ ಸಹಜ ಹಾಗೂ ಸುಲಭ ಮಾರ್ಗವಾಗಿದೆ.

''**ಸಾ ಪರಾನುರಕ್ತಿರೀಶ್ವರೇ ಭಕ್ತಿಃ**'' ಎಂಬ ಶಾಂಡಿಲ್ಯ ಸೂತ್ರದಂತೆ ಭಗವಂತನ ಮೇಲಿರುವ ಅತಿಶಯ ಪ್ರೇಮವೇ ಭಕ್ತಿ ಎನಿಸುತ್ತದೆ.

ಈ ಭಕ್ತಿಯಲ್ಲಿ ಗೌಣೀ ಭಕ್ತಿ ಹಾಗೂ ಪರಾಭಕ್ತಿ ಎಂದು ಎರಡು ಬಗೆ. ಗೌಣೀ ಭಕ್ತಿಯಲ್ಲಿ ಭಕ್ತನು ಭಗವಂತನನ್ನು ಹಿಡಿದಿರುವನು. ಪರಾಭಕ್ತಿಯಲ್ಲಿ ಭಗವಂತನೇ ಭಕ್ತನನ್ನು ಹಿಡಿದಿರುವನು. ಆಗ ಭಗವಂತನ ಮೇಲೆ ಸಂಪೂರ್ಣ ನಂಬಿಕೆ, ವಿಶ್ವಾಸಗಳು ಗಾಢವಾಗಿರುತ್ತವೆ. ಇದು ಹೇಗೆಂದರೆ ಚಿಕ್ಕ ಮಕ್ಕಳನ್ನು ಆಟವಾಡಿಸುವಾಗ ಅದನ್ನು ಮೇಲಕ್ಕೆತ್ತಿ ಕೆಳಗಿಳಿಸುವುದು, ಸ್ವಲ್ಪ ಮೇಲಕ್ಕೆಸೆದು ಹಿಡಿಯುವುದು ಹೀಗೆ ಆನಂದಿಸುವುದುಂಟು.

ಆ ಎಳೆಯ ಶಿಶುವನ್ನು ಮೇಲಕ್ಕೆಸೆದಾಗ ಅದು ಗಾಬರಿಗೊಳ್ಳುವುದಿಲ್ಲ, ಅಳುವುದಿಲ್ಲ. ಕಿಲಕಿಲನೆ ನಗುತ್ತದೆ. ತನ್ನನ್ನು ಮೇಲಕ್ಕೆಸೆದವರು ತನ್ನನ್ನು ಹಿಡಿದೇ ಹಿಡಿಯುತ್ತಾರೆ ಎಂಬ ಪೂರ್ಣ ನಂಬಿಕೆ ಆ ಶಿಶುವಿಗಿರುತ್ತದೆ. ತಾನು ಎಲ್ಲಿ ಕೆಳಗೆ ಬೀಳುವೆನೋ ಎಂಬ ಆತಂಕದ ಛಾಯೆಯೂ ಅಲ್ಲಿ ಮೂಡುವುದಿಲ್ಲ. ಇದು ನಂಬಿಕೆ. ಇಂತಹ ನಂಬಿಕೆಯನ್ನು ನಾವು ಭಗವಂತನಲ್ಲಿ ತೋರಿದರೆ ಆತ ನಮ್ಮ ಕೈಬಿಡುವುದಾದರೂ ಹೇಗೆ ಸಾಧ್ಯ?

''**ಕಲೌ ಭಕ್ತಿರ್ಗರೀಯಸೀ**'' ಎಂಬ ಮಾತಿನಂತೆ ಈ ಕಲಿಯುಗದಲ್ಲಿ ಭಕ್ತಿಯೊಂದೇ ಪ್ರಧಾನವಾದುದು. ಯಜ್ಞ-ಯಾಗಾದಿಗಳನ್ನು, ಜಪ-ತಪ-ಧ್ಯಾನಾದಿಗಳನ್ನು ಸೂಕ್ತವಾಗಿ ಆಚರಿಸಲಾಗದ ಪ್ರಾಪಂಚಿಕರು ಮೋಕ್ಷವನ್ನು ಗಳಿಸಲು ಇರುವ ಏಕೈಕ ಸುಲಭೋಪಾಯವೆಂದರೆ ಭಕ್ತಿ. ಇದಕ್ಕೆ ಯಾವುದೇ ನಿರ್ಬಂಧವಿಲ್ಲ. ಯಾವುದೇ ಪೂರ್ವಸಿದ್ಧತೆಗಳ ಅಗತ್ಯವಿಲ್ಲ. ಈ ಆಧುನಿಕ ಯುಗದಲ್ಲಿ ಯಾರಿಗೂ ಯಾವುದಕ್ಕೂ ಸಮಯವೇ ಇಲ್ಲ. ನಮ್ಮ ನಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಲೇ ಮನಸ್ಸಿನಲ್ಲಿ ಭಕ್ತಿಯನ್ನು ತುಂಬಿಕೊಂಡು; ನಾವು ಮಾಡುತ್ತಿರುವುದೆಲ್ಲ ಭಗವಂತನ ಕೈಂಕರ್ಯ ಎಂಬ ಭಾವನೆಯಿಂದ ಕಾರ್ಯ ನಿರ್ವಹಿಸಿದರೆ ಅದು ಉತ್ತಮ ಫಲವನ್ನೇ ನೀಡುತ್ತದೆ. ಇಂತಹ ಸುಲಭ ಮಾರ್ಗವನ್ನು ಭಗವಂತನು ನಮಗಾಗಿ ನೀಡಿರುವನು. ನಾವು ಎಲ್ಲಿರುವೆವೋ ಅಲ್ಲಿಂದ ನಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳುವ ಅವಕಾಶವನ್ನು ಗೀತೆಯು ನೀಡಿದೆ.

ಭಗವದ್ಗೀತೆಯು ಪ್ರಾರಂಭವಾಗುವುದು ಅರ್ಜುನನ ವಿಷಾದದಿಂದ. ವಿಷಾದವು ಭಕ್ತಿಯೆಡೆಗೆ ಸಾಗಲು ಮೂಲ ಮನೋಭೂಮಿಕೆಯಾಗಿರುತ್ತದೆ. ವಿಷಾದ, ದುಃಖ ಇವುಗಳನ್ನು ಸಹಿಸಿಕೊಳ್ಳುವ ಮನೋದಾರ್ಢ್ಯ ಲಭಿಸುವುದೇ ಭಕ್ತಿಯಿಂದ. ಭಕ್ತನು ಮಾತ್ರ ಎಲ್ಲವೂ ಭಗವಂತನ ಲೀಲೆ ಎಂದರಿತು ಮಾನಸಿಕ ಸ್ತಿಮಿತವನ್ನು ಹೊಂದಿರುತ್ತಾನೆ. ಸುಖ ದುಃಖಗಳು ಆತನನ್ನು ಬಾಧಿಸುವುದಿಲ್ಲ. ನಿಷ್ಕಾಮ ಭಾವದಿಂದ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಾನೆ. ಇಂತಹ ಸ್ಥಿತಪ್ರಜ್ಞನ ಸ್ಥಿತಿಗೆ ಅರ್ಜುನ ಏರಬೇಕಾಗಿದೆ. ಇದಕ್ಕಾಗಿ ಆತನಿಗೆ ದೊರಕಿರುವುದು ಭಕ್ತಿ ಎಂಬ ಅವಲಂಬನೆ.

ಎರಡನೆಯ ಅಧ್ಯಾಯದಲ್ಲೇ ''ನಾನು ನಿನ್ನ ಶಿಷ್ಯನಾಗಿ ಶರಣಾಗಿದ್ದೇನೆ. ನನಗೆ ಹಿತವನ್ನು ಹೇಳು'' ಎಂದು ಕೇಳುತ್ತಾನೆ.

**ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್ ॥** *(ಗೀತೆ, ೨-೭)*

ಯಾವಾಗ ಶಿಷ್ಯನಾಗಿ ವಿನೀತಭಾವದಿಂದ ಜ್ಞಾನವನ್ನು ಬಯಸುತ್ತಾನೋ ಆತನಿಗೆ ಗುರುವಿನ ಕೃಪೆ ದೊರೆಯುತ್ತದೆ. ಸ್ಥಿತಪ್ರಜ್ಞನ ಲಕ್ಷಣಗಳನ್ನು ಕೇಳಿ ಮನಸ್ಸು ಸ್ವಲ್ಪ ಶಾಂತವಾಗಿ ವಿಚಾರಗಳನ್ನು ತಿಳಿದುಕೊಳ್ಳುವ ಕುತೂಹಲ ಮೂಡಿತು. ಕೃಷ್ಣನಿಂದ ತನಗೆ ಶ್ರೇಯಸ್ಸು ನಿಶ್ಚಿತ ಎಂಬ ಭಾವ ಉದಯವಾಯಿತು. ಹಾಗಾಗಿ, **ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋಹಮಾಪ್ನುಯಾಮ್ ॥** *(೩-೨)* ಎಂಬುದಾಗಿ ಪ್ರಾರ್ಥಿಸಿದ.

ಅರ್ಜುನ ತನ್ನಲ್ಲಿ ಭಕ್ತಿಭಾವವನ್ನು ಹೊಂದಿರುವನು ಎಂಬುದು ದೃಢವಾದನಂತರ ಪರಮಾತ್ಮನು ಆತನಿಗೆ ಜ್ಞಾನದ ಒಂದೊಂದೇ ಮೆಟ್ಟಿಲನ್ನು ಹತ್ತಿಸತೊಡಗಿದನು. ಜ್ಞಾನವು ವರ್ಧಿಸುತ್ತಿದ್ದಂತೆ ಕರ್ಮವು ಕ್ಷೀಣಿಸುತ್ತಾ ಹೋಗುತ್ತದೆ. ತತ್ತ್ವಜ್ಞಾನ ದೃಢವಾದಂತೆ ಕರ್ಮದಲ್ಲಡಗಿರುವ ಫಲದ ಚಿಂತೆ ಕಡಿಮೆಯಾಗುತ್ತದೆ. ಪರಮಾತ್ಮನ ಮೇಲೆ ಪ್ರೀತಿ, ಭಕ್ತಿ ಹೆಚ್ಚಾಗುತ್ತದೆ. ಇಂತಹ ಭಕ್ತನು ಸರ್ವದಾ ಶಾಂತಚಿತ್ತನಾಗಿರುತ್ತಾನೆ. ಹಾಗಾಗಿ ನನ್ನಲ್ಲೇ ಮನಸ್ಸನ್ನಿಡು, ನನ್ನನ್ನೇ ಧ್ಯಾನಿಸು ಎಂದು ಭಗವಂತನು ಹಲವಾರು ಬಾರಿ ನುಡಿದಿರುವನು.

ಭಗವಂತನನ್ನೇ ನಂಬಿ ಆತನನ್ನೇ ಧ್ಯಾನಿಸುವವರು ನಾಲ್ಕು ಬಗೆಯಾಗಿರುತ್ತಾರೆ ಎಂದು ಪರಮಾತ್ಮನೇ ತಿಳಿಸುವನು.

**ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋ ಽರ್ಜುನ ।**
**ಆರ್ತಾ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥**

*(ಗೀತೆ, ೭-೧೬)*

ಆರ್ತ, ಜಿಜ್ಞಾಸು, ಅರ್ಥಾರ್ಥೀ, ಜ್ಞಾನಿ ಎಂಬ ನಾಲ್ಕು ವಿಧದ ಜನರು ನನ್ನನ್ನು ಆರಾಧಿಸುತ್ತಾರೆ.

ಆರ್ತ ಎಂದರೆ ಸಂಕಟದಲ್ಲಿರುವವನು. ಜಿಜ್ಞಾಸು ಎಂದರೆ ಭಗವತ್ತತ್ತ್ವವನ್ನು ತಿಳಿಯಬಯಸುವವನು. ಅರ್ಥಾರ್ಥೀ ಎಂದರೆ ಸುಖಸಂಪತ್ತುಗಳನ್ನು ಬಯಸುವವನು. ಜ್ಞಾನಿ ಎಂದರೆ ಆತ್ಮಜ್ಞಾನಿಯು. ಈತನಿಗೆ ಭಗವಂತ ಎಂದರೆ ಅತ್ಯಂತ ಪ್ರೀತಿ. ಈತನ ಚಿತ್ತವು ಭಗವಂತನನ್ನು ಬಿಟ್ಟು ಬೇರೆಡೆ ಚಲಿಸುವುದಿಲ್ಲ. ಇಂತಹ ಭಕ್ತನನ್ನು ಕಂಡರೆ ಭಗವಂತನಿಗೂ ಅತಿಶಯ ಪ್ರೀತಿ.

ಭಕ್ತರು ಯಾವ ಯಾವ ರೂಪದಿಂದ ತನ್ನನ್ನು ಆರಾಧಿಸುತ್ತಾರೋ ಅದೇ ರೂಪದಲ್ಲೇ ಅವರ ಭಕ್ತಿಯನ್ನು ಸ್ಥಿರಗೊಳಿಸುತ್ತೇನೆ ಎನ್ನುತ್ತಾನೆ ಪರಮಾತ್ಮ. ಯಾರ ಶ್ರದ್ಧೆಗೂ, ಸ್ವಾತಂತ್ರ್ಯಕ್ಕೂ ಅಡ್ಡಿಪಡಿಸುವುದಿಲ್ಲ ಭಗವಂತ. ಶ್ರದ್ಧಾಭಕ್ತಿಗಳಿಂದ ಯಾವ ದೇವತೆಗಳನ್ನು ಬೇಡಿದರೂ ಆ ಪರಮ ಪುರುಷನೇ ಆ ದೇವತೆಗಳ ಮೂಲಕ ಭಕ್ತರ ಕೋರಿಕೆಗಳನ್ನು ಈಡೇರಿಸುತ್ತಾನೆ. ದೇವತೆಗಳ ಆಕಾರ-ನಿರಾಕಾರ ಮುಖ್ಯವಲ್ಲ. ಭಕ್ತನ ಶ್ರದ್ಧೆ-ಭಕ್ತಿಗಳು ಮುಖ್ಯವಾಗುತ್ತವೆ.

ನಿಷ್ಕಾಮ ಭಕ್ತನು ತನಗಾಗಿ ಏನನ್ನೂ ಬಯಸುವುದಿಲ್ಲ. ಭಗವತ್ ಚಿಂತನೆಯೊಂದೇ ಆತನ ಧ್ಯೇಯವಾಗಿರುತ್ತದೆ. ಈತನು ಪರಿಪೂರ್ಣತೆಯನ್ನು ಸಾಧಿಸುತ್ತಾನೆ. ಈತನೇ ಯೋಗಿ ಎನಿಸಿಕೊಳ್ಳುತ್ತಾನೆ. ಪರಮಾತ್ಮನ ಪೂರ್ಣ ಕೃಪೆಗೆ ಪಾತ್ರನಾಗಿ ಆತನಲ್ಲೇ ಒಂದಾಗುತ್ತಾನೆ. ನಾವು ಜೀವಿಸಿರುವಾಗ ಉತ್ತಮ ಬದುಕನ್ನು ಪಡೆಯುವುದಷ್ಟೇ ಅಲ್ಲ; ಅನಂತರ ಉತ್ತಮ ಗತಿ

ಯನ್ನು ಪಡೆಯುವುದರ ಬಗ್ಗೆಯೂ ಗೀತೆಯು ತಿಳಿವಳಿಕೆಯನ್ನು ನೀಡುತ್ತದೆ. ಯಾರು ತಮ್ಮ ಜೀವನದಲ್ಲಿ ಸದಾಕಾಲವೂ ಪರಮಾತ್ಮನನ್ನೇ ಚಿಂತಿಸುತ್ತಿರುತ್ತಾರೋ ಅವರು ಪ್ರಾಣೋತ್ಕ್ರಮಣದ ಸಮಯದಲ್ಲೂ ಆ ಪರಮಾತ್ಮನ ಧ್ಯಾನವನ್ನೇ ಮಾಡುತ್ತಾರೆ. ಆತನ ದಿವ್ಯ ಸಾನ್ನಿಧ್ಯವನ್ನೇ ಪಡೆಯುತ್ತಾರೆ. ಆದ್ದರಿಂದ ಮುಂದೆ ನಮಗೆ ಒಳಿತಾಗಬೇಕೆಂಬ ಅಪೇಕ್ಷೆಯಿದ್ದರೆ ನಮ್ಮ ಚಂಚಲ ಮನಸ್ಸನ್ನು ಪರಮಾತ್ಮನಲ್ಲಿ ಸ್ಥಿರಗೊಳಿಸುವ ಪ್ರಯತ್ನವನ್ನು ಚಿಕ್ಕ ವಯಸ್ಸಿನಿಂದಲೇ ಪ್ರಾರಂಭಿಸಿರಬೇಕು. ಇಂತಹ ಉತ್ತಮ ಸಂಸ್ಕಾರವನ್ನು ರೂಢಿಸಿಕೊಳ್ಳುವ ಅಗತ್ಯವನ್ನು ಗೀತೆ ಸಾರಿ ಹೇಳುತ್ತದೆ.

ಇಂತಹ ಭಕ್ತರನ್ನು ತಾನು ಸರ್ವದಾ ರಕ್ಷಿಸುತ್ತೇನೆ ಎಂದು ಭಗವಂತನೇ ಆಶ್ವಾಸನೆ ನೀಡಿರುವನು.

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್॥**

*(ಗೀತೆ, ೯-೨೨)*

ಯಾರು ಅನನ್ಯ ಭಾವದಿಂದ ನನ್ನನ್ನು ಚಿಂತಿಸುತ್ತಾ ನನ್ನನ್ನು ಭಜಿಸುತ್ತಾರೋ, ನನ್ನಲ್ಲಿಯೇ ನಿರತರಾಗಿರುವ ಅವರ ಯೋಗಕ್ಷೇಮವನ್ನು ನಾನು ವಹಿಸುತ್ತೇನೆ.

**ಅಲಬ್ಧಸ್ಯ ಲಾಭಃ ಯೋಗಃ** – ನಮಗೆ ಸಿಕ್ಕದೇ ಇರುವ ವಸ್ತು ಸಿಗುವುದು ಯೋಗ.

**ಲಬ್ಧಸ್ಯ ಪರಿಪಾಲನಂ ಕ್ಷೇಮಃ** – ಸಿಕ್ಕಿರುವುದನ್ನು ಸಂರಕ್ಷಿಸುವುದು ಯೋಗ.

ಶ್ರೇಷ್ಠ ಭಕ್ತರು ಬಯಸುವುದು ಕೇವಲ ಭಗವತ್ಪ್ರಾಪ್ತಿಯನ್ನು ಮಾತ್ರ. ಅದು ಯೋಗ. ಅದು ನಾಶವಾಗದಂತೆ ರಕ್ಷಿಸುವುದು ಕ್ಷೇಮ. ಭಕ್ತನು ಯಾವಾಗ ತನ್ನ ಸಂಪೂರ್ಣ ಜವಾಬ್ದಾರಿಯನ್ನು ಭಗವಂತನಿಗೆ ಅರ್ಪಿಸುತ್ತಾನೋ ಆಗ ಅಂತಹ ಭಕ್ತನ ಸಂಪೂರ್ಣ ಹೊಣೆ ಭಗವಂತನದೇ ಆಗುತ್ತದೆ.

ಜ್ಞಾನೀ ಭಕ್ತನು ತನ್ನ ಮೂಲಸ್ವರೂಪವಾದ ಪರಮಾತ್ಮನಲ್ಲೇ ಸರ್ವದಾ ನೆಲೆನಿಂತಿರುತ್ತಾನೆ. ಪ್ರಪಂಚದ ಯಾವ ವ್ಯಾಮೋಹಗಳೂ ಈತನನ್ನು ಸೆಳೆಯುವುದಿಲ್ಲ. ಎಲ್ಲೆಲ್ಲೂ ಪರಮಾತ್ಮನನ್ನೇ ಕಾಣುವುದರಿಂದ ಯಾರ ಮೇಲೂ ದ್ವೇಷ ಮೂಡುವುದಿಲ್ಲ; ಯಾರೊಬ್ಬರ ಮೇಲೂ ಮೋಹವೂ ಹುಟ್ಟುವುದಿಲ್ಲ. ಯಾವ ಆಸೆಗಳೂ ಆತನಿಗಿರುವುದಿಲ್ಲ. ಇಂತಹ ಭಕ್ತನನ್ನು ಭಗವಂತನು ಹೇಗೆ ತಾನೇ ರಕ್ಷಿಸದೇ ಇರಲು ಸಾಧ್ಯ?

ಇಂತಹ ಭಕ್ತ ತನ್ನನ್ನು ಹೇಗೆ ಪೂಜಿಸಿದರೂ ತಾನು ಅದನ್ನು ಸ್ವೀಕರಿಸುತ್ತೇನೆ ಎನ್ನುತ್ತಾನೆ ಭಗವಂತ.

**ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ।**
**ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥** *(೯-೨೬)*

‘ಚಿತ್ತಶುದ್ಧಿಯುಳ್ಳವರು ಭಕ್ತಿಯಿಂದ ಎಲೆ, ಹೂವು, ಹಣ್ಣು, ನೀರು ಹೀಗೆ ಏನನ್ನು ಅರ್ಪಿಸಿದರೂ ನಾನು ಅದನ್ನು ಸ್ವೀಕರಿಸುತ್ತೇನೆ.’

ನಿಜವಾದ ಭಕ್ತಿಗೆ ಮಾತ್ರ ಭಗವಂತ ಒಲಿಯುವುದು ಎಂಬುದು ಅನೇಕ ದೃಷ್ಟಾಂತಗಳಿಂದ ತಿಳಿದುಬಂದ ಸತ್ಯವಾಗಿದೆ. ಸುದಾಮ ನೀಡಿದ ಹಿಡಿಯವಲಕ್ಕಿಗೆ ಅತುಲ ಸಂಪತ್ತನ್ನೇ ಕರುಣಿಸಿದವನಾತ. ಶಬರಿಯು ನೀಡಿದ ಹಣ್ಣನ್ನು ಸ್ವೀಕರಿಸಿ ಮೋಕ್ಷವನ್ನೇ ಆಕೆಗೆ ಕರುಣಿಸಿದ. ಗಜೇಂದ್ರನ ಮೊರೆ ಕೇಳಿ ಆತನನ್ನು ಉದ್ಧರಿಸಿದ. ಬಾಲಕ ಪ್ರಹ್ಲಾದನ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾದ. ಅಂಬರೀಷನ ಭಕ್ತಿಗೆ ಒಲಿದು ಅನುಗ್ರಹಿಸಿದ. ಇಂತಹ ಅನೇಕ ಉದಾಹರಣೆಗಳನ್ನು ಪುರಾಣಗಳ ಮೂಲಕ ಅರಿಯಬಹುದು. ಈ ಕಲಿಯುಗದಲ್ಲೂ ಕೇವಲ ಭಗವಂತನ ನಾಮಸ್ಮರಣೆ ಮಾತ್ರದಿಂದ ಮುಕ್ತಿಯನ್ನು ಪಡೆದ ಅನೇಕ ದಾಸಶ್ರೇಷ್ಠರು, ಸಂತರು, ಭಕ್ತಾಗ್ರೇಸರರನ್ನು ಕಾಣಬಹುದು. ಭಕ್ತಿಯೊಂದೇ ಭಗವಂತನನ್ನು ಗೆಲ್ಲಬಲ್ಲದು. ನೈಜ ಭಕ್ತನು ಎಂದೆಂದೂ ಭಗವತ್ಕೃಪೆಗೆ ಪಾತ್ರನಾಗುವನು.

ಇಂತಹ ಕೃಪೆ ಪಡೆಯುವುದು ಹೇಗೆ? ಭಗವಂತನನ್ನು ಹೊಂದುವುದು ಹೇಗೆ? ಇದಕ್ಕೆ ದಾರಿಯೇ ತಿಳಿದಿಲ್ಲವಲ್ಲ. ಯಾರು ನನಗೆ ಮಾರ್ಗದರ್ಶನ ಮಾಡಬಲ್ಲರು? ಎಂಬ ಪ್ರಶ್ನೆಗಳು ನಮಗೆ ಮೂಡತೊಡಗಿದರೆ ಅದಕ್ಕೆ ಪರಮಾತ್ಮನೇ ದಾರಿ ತೋರಿರುವನು.

**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।**
**ಮಾಮೇವೈಷ್ಯಸಿ ಯುಕ್ತ್ವೈವಂ ಆತ್ಮಾನಂ ಮತ್ಪರಾಯಣಃ ॥**

*(ಗೀತೆ, ೯-೩೪)*

‘ನನ್ನಲ್ಲಿಯೇ ಮನಸ್ಸುಳ್ಳವನಾಗು. ನನ್ನ ಭಕ್ತನಾಗು. ನನ್ನನ್ನೇ ಕುರಿತು ಯಾಗ ಮಾಡು. ನನ್ನನ್ನೇ ನಮಸ್ಕರಿಸು. ಹೀಗೆ ನನ್ನನ್ನೇ ಆಶ್ರಯವನ್ನಾಗಿ ಭಾವಿಸು. ನನ್ನಲ್ಲಿ ಆಸಕ್ತನಾಗಿ ನಿನ್ನನ್ನು ಹೀಗೆ ನನ್ನ ಉಪಾಸನೆಯಲ್ಲಿ ತೊಡಗಿಸಿದರೆ ನನ್ನನ್ನೇ ಪಡೆಯುವೆ.’

ಇದಕ್ಕಿಂತ ಆಶ್ವಾಸನೆ ನಮಗೆ ಬೇರೇನು ತಾನೆ ದೊರೆಯಲು ಸಾಧ್ಯ? ಇಂತಹ ದೃಢ ಭಕ್ತಿ ಯಾರಲ್ಲಿ ಮೂಡುತ್ತದೋ ಆತನೇ ಶ್ರೇಷ್ಠ ಭಕ್ತ. ಅರ್ಜುನನಲ್ಲಿ ಇಂತಹ ಭಕ್ತಿ ಉದಯಿಸಿತು. ಆದ್ದರಿಂದ ಭಗವಂತನಿಗೆ ಶರಣಾಗಿ ಆತನನ್ನು ಸ್ತುತಿಸತೊಡಗಿದ.

**ಪರಂ ಬ್ರಹ್ಮ ಪರಂ ಧಾಮ ಪವಿತ್ರಂ ಪರಮಂ ಭವಾನ್ ।**
**ಪುರುಷಂ ಶಾಶ್ವತಂ ದಿವ್ಯಂ ಆದಿದೇವಮಜಂ ವಿಭುಮ್ ॥**
*(ಗೀತೆ, ೧೦-೧೨)*

‘ನೀನೇ ಪರಬ್ರಹ್ಮ. ನೀನೇ ಪರಮಧಾಮ. ನೀನೇ ಪರಮಪವಿತ್ರ. ಶಾಶ್ವತನೂ, ದಿವ್ಯನೂ, ವಿಭುವೂ ಆದ ಪರಮಪುರುಷನು ನೀನೇ ಆಗಿರುವೆ.’

ಈ ಹಂತದಲ್ಲಿ ಅರ್ಜುನ ತನಗೆ ಶರಣಾಗಿದ್ದಾನೆ ಎಂದರಿತ ಶ್ರೀಕೃಷ್ಣನು ಅರ್ಜುನನ ಭಾವನೆಯನ್ನು ಮತ್ತಷ್ಟು ದೃಢಪಡಿಸಲು ತನ್ನ ವಿಭೂತಿಗಳನ್ನು ವಿಸ್ತಾರವಾಗಿ ತಿಳಿಸುತ್ತಾನೆ. ಅದನ್ನಾಲಿಸಿದ ಅರ್ಜುನ ಶ್ರೀಕೃಷ್ಣನೇ ಸ್ವಯಂ ಪರಮಾತ್ಮ ಎಂದರಿತು ಭಕ್ತಿಭಾವದಿಂದ ಆತನನ್ನು ಸ್ತುತಿಸುತ್ತಾನೆ. ಭಗವಂತನ ಆ ದಿವ್ಯ ರೂಪವನ್ನು ಕಾಣಲು ಹಾತೊರೆಯುತ್ತಾನೆ. ಅರ್ಜುನನ ಮೋಹವೆಲ್ಲವೂ ನಾಶವಾಗಿದೆ ಎಂದರಿತ ಭಗವಂತ ತನ್ನ ವಿಶ್ವರೂಪವನ್ನು ನೋಡಲು ಬೇಕಾದ ದಿವ್ಯದೃಷ್ಟಿಯನ್ನೂ ಆತನಿಗೆ ಅನುಗ್ರಹಿಸಿದ. ಭಗವಂತನ ಅನುಗ್ರಹಕ್ಕೆ ಪಾತ್ರನಾದ ಬಳಿಕ ಭಕ್ತರ ಉದ್ಧಾರಕ್ಕೆ ಬೇರೇನು ತಾನೆ ಅಡ್ಡಿ?

ಭಕ್ತಿ ಪರವಶನಾದ ಭಕ್ತನು ತನ್ನ ಆರಾಧ್ಯ ಮೂರ್ತಿಯನ್ನು ನಾನಾ ವಿಧವಾಗಿ ಸ್ತುತಿಸುತ್ತಾನೆ. ಹಾಗೆಯೇ ಅರ್ಜುನನು ಶ್ರೀಕೃಷ್ಣನ ವಿಶ್ವರೂಪವನ್ನು ದರ್ಶಿಸಿ ಆಶ್ಚರ್ಯಭರಿತನಾಗಿ ಅನೇಕ ವಿಧದಿಂದ ಆತನನ್ನು ಸ್ತುತಿಸುತ್ತಾನೆ. ನನ್ನಲ್ಲಿ ಪ್ರಸನ್ನನಾಗು ಎಂದು ಬೇಡಿಕೊಳ್ಳುತ್ತಾನೆ. ಆತನ ಕೃಪೆಗಾಗಿ ಹಂಬಲಿಸುತ್ತಾನೆ. ಆದರೆ ಆ ದಿವ್ಯ, ಭಯಂಕರ, ಅದ್ಭುತ ರೂಪವನ್ನು ಸಹಿಸಲಾರದೆ ನಿನ್ನ ಹಿಂದಿನ ಸೌಮ್ಯ ರೂಪವನ್ನೇ ತೋರಿಸು ಎನ್ನುತ್ತಾನೆ. ಭಕ್ತ ಸರ್ವದಾ ಭಗವಂತನ ಸೌಮ್ಯ ಹಾಗೂ ಮಂಗಳ ರೂಪವನ್ನೇ ತನ್ನ ಹೃದಯದಲ್ಲಿ ಧರಿಸಲು ಬಯಸುತ್ತಾನೆ.

ಭಗವಂತನು ಸಾಕಾರ, ನಿರಾಕಾರ ತತ್ತ್ವಗಳೆರಡನ್ನೂ ಹೊಂದಿದ್ದಾನೆ ಎಂಬುದು ಅರ್ಜುನನಿಗೆ ಅರಿವಾಯಿತು. ಆದರೆ ಯಾವ ರೂಪವನ್ನು ಆರಾಧಿಸುವುದು ಶ್ರೇಷ್ಠ ಎಂಬ ಗೊಂದಲವುಂಟಾಯಿತು. ಅದಕ್ಕಾಗಿ ಪುನಃ ಪ್ರಶ್ನಿಸುವನು :

**ಏವಂ ಸತತಯುಕ್ತಾ ಯೇ ಭಕ್ತಾಸ್ತ್ವಾಂ ಪರ್ಯುಪಾಸತೇ ।**
**ಯೇ ಚಾಪ್ಯಕ್ಷರಮವ್ಯಕ್ತಮ್ ತೇಷಾಂ ಕೇ ಯೋಗವಿತ್ತಮಾಃ ॥**

*(ಗೀತೆ, ೧೨-೧)*

'ಹೇ ಕೃಷ್ಣ! ನಿನ್ನ ಸಗುಣರೂಪವನ್ನು ಅಥವಾ ನಿರ್ಗುಣ ರೂಪವನ್ನು ಎಡೆಬಿಡದೆ ಉಪಾಸಿಸುವ ಉಭಯ ಭಕ್ತರಲ್ಲಿ ಶ್ರೇಷ್ಠರು ಯಾರು?'

ಇದಕ್ಕೆ ಉತ್ತರರೂಪವಾಗಿ ಭಗವಂತನು - ಯಾರು ನನ್ನಲ್ಲೇ ಮನಸ್ಸನ್ನಿಟ್ಟಿರುತ್ತಾರೋ ಅವರೇ ಶ್ರೇಷ್ಠರು ಎಂದು ಹೇಳುತ್ತಾನೆ. ಅಂದರೆ ಭಗವಂತನನ್ನು ಒಲಿಸಿಕೊಳ್ಳಬೇಕಾದರೆ ನಮ್ಮ ಶುದ್ಧ ಮನಸ್ಸಿನಿಂದ ಮಾತ್ರ ಸಾಧ್ಯ. ಪರಮಾತ್ಮನನ್ನು ಸತತವಾಗಿ ಧ್ಯಾನಿಸುತ್ತಾ ಆತನನ್ನೇ ಹೊಂದುವುದು ಹೇಗೆ ಎಂಬ ಸುಲಭೋಪಾಯವನ್ನೂ ಆತನೇ ನಮಗೆ ತಿಳಿಸಿರುವನು.

**ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।**
**ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥**

*(೧೨-೮)*

'ನನ್ನಲ್ಲಿಯೇ ಮನಸ್ಸನ್ನಿಡು. ನನ್ನಲ್ಲಿಯೇ ಬುದ್ಧಿಯನ್ನು ತೊಡಗಿಸು. ಇದರಿಂದ ನೀನು ನನ್ನಲ್ಲಿಯೇ ನೆಲೆಸುವೆ. ಇದರಲ್ಲಿ ಸಂಶಯವಿಲ್ಲ.'

ಮನಸ್ಸು ಅತ್ಯಂತ ಚಂಚಲ. ಇದನ್ನು ನಿಗ್ರಹಿಸುವುದು ಹೇಗೆ ಸಾಧ್ಯ? ಎಂಬ ಸಂಶಯ ಮೂಡಿದರೆ ಅದಕ್ಕಿಂತ ಸುಲಭ ಉಪಾಯವನ್ನು ಹೇಳುತ್ತಿರುವನು ಪರಮಾತ್ಮ.

**ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಮ್ ।**
**ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ ॥**

*(ಗೀತೆ, ೧೨-೯)*

'ಹೇ ಧನಂಜಯನೇ! ನನ್ನಲ್ಲಿ ಚಿತ್ತವನ್ನು ಸ್ಥಿರವಾಗಿ ನಿಲ್ಲಿಸಲು ಸಾಧ್ಯವಾಗದಿದ್ದರೆ ಆಗ ಅಭ್ಯಾಸಯೋಗದಿಂದ ನನ್ನನ್ನು ಪಡೆಯಲಿಚ್ಛಿಸು.'

ಅಭ್ಯಾಸವೂ ಕಷ್ಟ ಎಂದಾದರೆ,

**ಅಭ್ಯಾಸೇಽಪ್ಯಸಮರ್ಥೋಽಸಿ ಮತ್ಕರ್ಮಪರಮೋ ಭವ ।**
**ಮದರ್ಥಮಪಿ ಕರ್ಮಾಣಿ ಕುರ್ವನ್ಸಿದ್ಧಿಮವಾಪ್ಸ್ಯಸಿ ॥**

*(೧೨-೧೦)*

'ಅಭ್ಯಾಸ ಮಾಡುವುದಕ್ಕೂ ಅಸಮರ್ಥನಾದರೆ ನನಗಾಗಿ ಕರ್ಮಗಳನ್ನು ಮಾಡುವುದರಲ್ಲಿ ನಿರತನಾಗು. ನನಗಾಗಿಯೇ ಕರ್ಮಗಳನ್ನು ಮಾಡುತ್ತಿದ್ದರೂ ನೀನು ಸಿದ್ಧಿಯನ್ನು ಪಡೆಯುವೆ.'

ಕೃಪಾಳುವಾದ ಭಗವಂತ ತನ್ನ ಭಕ್ತರ ಉದ್ಧಾರಕ್ಕಾಗಿ ಅನೇಕ ಸುಲಭ ಮಾರ್ಗಗಳನ್ನು ತಾನೇ ತೋರಿಸಿದ್ದಾನೆ. ಇವು ಕೇವಲ ಅರ್ಜುನನಿಗೆ ಬೋಧಿಸಿದ್ದಲ್ಲ. ಏಕೆಂದರೆ ಅರ್ಜುನನು ಮಹಾತೇಜಸ್ವಿ. ಮನಸ್ಸನ್ನು ನಿಗ್ರಹಿಸಲಾರದ ಹೇಡಿಯಲ್ಲ. ಮನಸ್ಸನ್ನು ಭಗವಂತನಲ್ಲಿ ನೆಲೆ ನಿಲ್ಲಿಸಲಾರದ ದೃಢತೆ ಇಲ್ಲದವನಲ್ಲ. ಭಗವಂತನ ಅವತಾರವಾಗಿರುವುದೇ ಲೋಕೋದ್ಧಾರಕ್ಕಾಗಿ. ತನ್ನ ಭಕ್ತರೆಲ್ಲರೂ ಸದ್ಗತಿಯನ್ನು ಪಡೆಯಬೇಕು. ಭಕ್ತರೆಲ್ಲರೂ ಸುಲಭವಾಗಿ ಸಂಸಾರ ಸಾಗರವನ್ನು ದಾಟಬೇಕು ಎಂಬ ಅಪೇಕ್ಷೆ ಪರಮಾತ್ಮನಿಗಿದೆ. ಆದರೆ ಎಲ್ಲ ಭಕ್ತರೂ ಒಂದೇ ರೀತಿಯ ಮಾನಸಿಕ ಸಿದ್ಧತೆಯನ್ನು ಹೊಂದಿರುವುದಿಲ್ಲ. ಹಾಗಾಗಿ ಸಮಸ್ತ ಜನರ ಹಿತವನ್ನು ಬಯಸಿದ ಭಗವಂತ ಅರ್ಜುನನ ನೆಪದಿಂದ ನಮಗೆಲ್ಲ ಇಂತಹ ದಿವ್ಯ ಮಾರ್ಗದರ್ಶನವನ್ನು ಮಾಡಿರುವನು. ಅದನ್ನನುಸರಿಸಿ ಶ್ರೇಯಸ್ಸಿನ ಮಾರ್ಗದತ್ತ ಸಾಗುವುದಷ್ಟೇ ನಮ್ಮ ಕರ್ತವ್ಯ.

ಭಗವದ್ಗೀತೆಯನ್ನೂ ಒಳಗೊಂಡಂತೆ ಸಮಸ್ತ ಕುರುಕ್ಷೇತ್ರ ಯುದ್ಧವನ್ನು ಕಣ್ಣಾರೆ ಕಂಡು ಅದನ್ನು ಧೃತರಾಷ್ಟ್ರನಿಗೆ ವರ್ಣಿಸಿದ್ದು ಸಂಜಯ. ಇಲ್ಲಿ ಸಂಜಯ ಒಬ್ಬ ಅದ್ಭುತ ವ್ಯಕ್ತಿಯಾಗಿ

ತೋರುತ್ತಾನೆ. ಕುರುಕ್ಷೇತ್ರ ಯುದ್ಧವನ್ನು ನೇರವಾಗಿ ಕಂಡ. ಭಗವಂತನ ಗೀತೋಪದೇಶವನ್ನು ನೇರವಾಗಿ ಆಲಿಸಿದ. ಪರಮಾತ್ಮನ ವಿಶ್ವರೂಪ ದರ್ಶನವನ್ನು ಕಂಡು ವಿಸ್ಮಯಗೊಂಡ. ಕಂಡದ್ದನ್ನೆಲ್ಲಾ ಧೃತರಾಷ್ಟ್ರನಿಗೆ ವಿವರಿಸಿದ. ಪರಮಾತ್ಮನ ಲೀಲಾ ವಿಭೂತಿಗಳ ಪರಿಚಯವನ್ನು ಹೊಂದಿ ಆಶ್ಚರ್ಯಭರಿತನಾದ. ಭಕ್ತಿಭಾವ ಪರವಶನಾದ.

**ತಚ್ಚ ಸಂಸ್ಮೃತ್ಯ ಸಂಸ್ಮೃತ್ಯ ರೂಪಮತ್ಯದ್ಭುತಂ ಹರೇಃ ।**
**ವಿಸ್ಮಯೋ ಮೇ ಮಹಾನ್ ರಾಜನ್ ಹೃಷ್ಯಾಮಿ ಚ ಪುನಃ ಪುನಃ॥**

*(ಗೀತೆ, ೧೮-೭೭)*

'ಹೇ ರಾಜನೇ! ಅತ್ಯದ್ಭುತವಾದ ಭಗವಂತನ ಆ ವಿಶ್ವರೂಪವನ್ನು ನೆನೆದು ನೆನೆದು, ಪುನಃ ಪುನಃ ಆನಂದಪರವಶನಾಗುತ್ತೇನೆ.'

ಭಗವಂತನ ರೂಪವನ್ನು ನೇರವಾಗಿ ಕಂಡ ಅದೃಷ್ಟವಂತನೀತ. ಅದನ್ನು ಪುನಃ ಪುನಃ ಸ್ಮರಿಸಿಕೊಂಡು ಹರ್ಷಿತನಾದ, ವಿಸ್ಮಯಗೊಂಡ. ಅದೇ ರೀತಿ ನಾವು ಆ ಪರಮಾತ್ಮನ ವಿಭೂತಿಗಳನ್ನು ಪುನಃ ಪುನಃ ಸ್ಮರಿಸಿಕೊಳ್ಳುತ್ತಿರಬೇಕು. ಅರ್ಜುನ ಹೇಗೆ ಭಗವಂತನೊಡನೆ ಸಂಭಾಷಣೆ ಮಾಡಿದನೋ ಅದೇ ರೀತಿ ಆತ್ಮೀಯತೆಯಿಂದ ಆತನೊಡನೆ ಸಂಭಾಷಿಸುವ ಅರ್ಹತೆಯನ್ನು ಪಡೆಯಬೇಕು. ಭಕ್ತಿಭಾವ ಪರವಶರಾದ ಭಕ್ತಾಗ್ರೇಸರರ ಭಾವೋದ್ರೇಕವನ್ನು ಅನುಭವಿಸಬೇಕು. ಯಾವಾಗ ಶುದ್ಧಭಕ್ತಿ ಮನಸ್ಸನ್ನು ಆವರಿಸುತ್ತದೋ ಆಗ ಇಂತಹ ಭಾವ ತಾನೇತಾನಾಗಿ ಮನಸ್ಸಿನಲ್ಲಿ ದೃಢವಾಗುತ್ತದೆ. ಅಂತಹವನೇ ನಿಜವಾದ ಭಕ್ತ. ಇಂತಹ ಭಕ್ತ ಗೀತೆಗೆ ಭಕ್ತಿಯಿಂದ ಶರಣಾಗುತ್ತಾನೆ. ತನ್ನ ಬದುಕಿನ ಸಾರ್ಥಕತೆಯನ್ನು ಪಡೆಯುತ್ತಾನೆ. ಶ್ರೇಯಸ್ಸಿನ ಮಾರ್ಗದೆಡೆ ಹೆಜ್ಜೆಯಿಡತೊಡಗುತ್ತಾನೆ.

**ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಮ್ ।**
**ಯತ್ಕೃಪಾ ತಮಹಂ ವಂದೇ ಪರಮಾನಂದಮಾಧವಮ್ ॥**

ಎಂಬಂತೆ ಭಗವಂತನ ಕೃಪೆಯೊಂದು ದೊರಕಿದರೆ ಅಸಾಧ್ಯವೆಲ್ಲವೂ ಸಾಧ್ಯವಾಗುತ್ತದೆ. ಇದಕ್ಕೆ ಅಗತ್ಯವಾದುದು ದೃಢಭಕ್ತಿ ಮಾತ್ರ. ಗೀತೆಯು ಇಂತಹ ದೃಢಭಕ್ತಿಯನ್ನು, ಈ ರೀತಿಯ ಭಕ್ತಿಯನ್ನು ಹೊಂದಿರುವ ಭಕ್ತರ ಲಕ್ಷಣಗಳನ್ನೂ ತಿಳಿಸಿ ಸಮಸ್ತ ಜಗತ್ತಿನ ಕಲ್ಯಾಣವನ್ನು ಸಾಧಿಸಿದೆ. ಅತ್ಯಂತ ಸರಳ ಹಾಗೂ ಮಹತ್ವದ ಮಾರ್ಗವನ್ನು ಜನರಿಗೆ ಬೋಧಿಸಿದ ಉತ್ಕೃಷ್ಟ ಕೃತಿಯೆಂದರೆ ಶ್ರೀಮದ್ಭಗವದ್ಗೀತೆ.


*With Best Compliments From :*

GAVIRANGA ENTERPRISES
ELECTRONICS DIVISION

UNIT I & II, INDUSTRIAL ESTATE
B.H.ROAD, TUMKUR - 572 103, INDIA.
Tel : +91 816 2280380 / 480. Mob: 9844099015
E-Mail : jayasimha@gaviranga.com
Web : www.gaviranga.com

*Advantage To World - Class Magnetics*